**ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>ಪಾಟೀ ಸವಾಲು 5 (ಎ) ಪ್ರತಿವಾದಿ ಪರ ಶ್ರೀ. ಆರ್ ಸಿ ಎಸ್ ವಕೀಲರಿಂದಃ-</u>

ನಾನು ಬೆಂಗಳೂರಿನ ಶೆಟ್ಟಿಹಳ್ಳಿಯಲ್ಲಿ ಸುಮಾರು 16 ವರ್ಷಗಳಿಂದ ವಾಸ ಇರುತ್ತೇನೆ. ನನ್ನ ತಾಯಿ 4 ನೇ ವಾದಿಯೂ ಸಹ ಬೆಂಗಳೂರಿನಲ್ಲಿ ವಾಸ ಇರುತ್ತಾರೆ. ತಾವು ಯಾವ ಸರ್ವೆ ನಂಬರ್ ಆಸ್ತಿಗೆ ದಾವೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಸರ್ವೆ ನಂ.315/6 ವಿಸ್ತೀರ್ಣ 1 ಎಕರೆ 1 ಗುಂಟೆಗೆ ಎಂದು ನುಡಿಯುತ್ತಾರೆ. ತಾವು ದಾವಾ ಹೂಡುವ ಪೂರ್ವದಲ್ಲಿ ದಾವಾ ಆಸ್ತಿಯ ಖಾತೆ ಯಾರ ಹೆಸರಿಗೆ ಇತ್ತು ಎಂದು ಕೇಳಲಾಗಿ ಸಾಕ್ಷಿ ತಮ್ಮ ತಂದೆಯ ಹೆಸರಿಗೆ ಎಂದು ನುಡಿಯುತ್ತಾರೆ. ನನ್ನ ತಾತ ಮರಣ ಹೊಂದಿದ ನಂತರ ಪೌತಿ ಮೇರೆಗೆ ನನ್ನ ತಂದೆಯ ಹೆಸರಿಗೆ ದಾವಾ ಆಸ್ತಿಯು ಖಾತೆ ಆಗಿರುತ್ತದೆ. ದಾವಾ ಆಸ್ತಿಯು ತಮ್ಮ ತಂದೆಯ ಹೆಸರಿಗೆ ಖಾತೆ ಆಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ತಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಹೂಡುವ ಪೂರ್ವದಲ್ಲಿ ದಾವಾ ಆಸ್ತಿಯಲ್ಲಿ ಭಾಗ ಕೊಡುವಂತೆ ಯಾವಾಗ ಯಾರನ್ನು ಕೇಳಿರುತ್ತೀರಿ ಎಂದರೆ ಸಾಕ್ಷಿಯು 15 ವರ್ಷಗಳ ಹಿಂದೆ 3 ನೇ ಪ್ರತಿವಾದಿ ಲಕ್ಷ್ಮಮ್ಮರವರನ್ನು ಕೇಳಿದ್ದೇನೆ ಎಂದು ನುಡಿಯುತ್ತಾರೆ. ನಾನು ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯ ಖಾತೆ 1 ನೇ ಪ್ರತಿವಾದಿ ಸುಮಂತ್ ರವರ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ನಾನೇ ಹಾಜರುಪಡಿಸಿರುವ ನಿ ಪಿ 1 ದಾಖಲೆಯಂತೆ ದಾವಾ ಹೂಡುವ ಕಾಲಕ್ಕೆ 1 ನೇ ಪ್ರತಿವಾದಿ ಹೆಸರಿಗ ದಾವಾ ಆಸ್ತಿಯ ಖಾತೆ ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆತನ ತಂದೆಯ ನಡುವೆ ಆಸ್ತಿಗಳು ವಿಭಾಗ ಆಗಿದ್ದು, ವಿಭಾಗದ ಮೂಲಕ ದಾವಾ ಆಸ್ತಿಯು 1 ನೇ ಪ್ರತಿವಾದಿ ಹೆಸರಿಗೆ ಎಂ ಆರ್ 88/2009 -10 ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಮತ್ತು ಕುಟುಂಬಸ್ಥರು ತಮ್ಮ ಕುಟುಂಬದ ಖರ್ಚು ವೆಚ್ಚಕ್ಕಾಗಿ ದಾವಾ ಆಸ್ತಿಯನ್ನು ದಿಃ 07.10.2011 ರಂದು ಪದ್ಮ ಬಿನ್ ರಾಮಕೃಷ್ಣಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಕ್ರಯಪತ್ರದ ಆಧಿಾರದ ಮೇಲೆ ಖರೀದಿದಾರರಾದ ಪದ್ಮರವರ ಹೆಸರಿಗೆ ಎಂ ಆರ್ ಹೆಚ್ 39/2011-12 ರೀತ್ಯಾ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸ್ವಾಧೀನವನ್ನು ಖರೀದಿ ಪತ್ರ ಆದ ದಿನವೇ 1 ನೇ ಪ್ರತಿವಾದಿಯು ಪದ್ಮರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪದ್ಮರವರು ದಾವಾ ಆಸ್ತಿಯ ಸುತ್ತ ತಂತಿ ಬೇಲಿ ನಿರ್ಮಿಸಿ ಅದರಲ್ಲಿ 35 ತೆಂಗಿನ ಮರ ಮತ್ತು ಬಾಳೆ, ಪರಂಗಿ ಬೆಳೆಗಳನ್ನು ಬೆಳೆಯುತ್ತಾ ಬಂದಿದ್ದು ಕಾಲ ಕಾಲಕ್ಕೆ ಕಂದಾಯ ಸಹ ಪಾವತಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ತಾವು ಸ್ವಾಧೀನ ಇದ್ದೀರಿ ಎಂದು ತೋರಿಸಲು ತಮ್ಮ ಹೆಸರಿನಲ್ಲಿ ಪಾವತಿ ಮಾಡಿರುವ ಕಂದಾಯದ ರಶೀದಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಪಾವತಿ ಮಾಡಿಲ್ಲ ಎನ್ನುತ್ತಾರೆ. ದಾವಾ ಹೂಡುವ ಪೂರ್ವದಲ್ಲಿ ಅರುಣ್ ಕುಮಾರ್ ರವರನ್ನಾಗಲೀ ಅಥವಾ ಖರೀದಿದಾರರಾದ ಪದ್ಮರವರನ್ನಾಗಲೀ ಬೇಟಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಅರುಣ್ ಕುಮಾರ್ ರವರನ್ನು ಬೇಟಿ ಮಾಡಿದ್ದೆ ಎನ್ನುತ್ತಾರೆ. ಖರೀದಿದಾರರಾದ ಪದ್ಮ ರವರು ಮಾರಾಟದಾರರಾದ 1 ನೇ ಪ್ರತಿವಾದಿರವರಗೆ ಸರಿಯಾಗಿ ಹಣವನ್ನು ನೀಡಿಲ್ಲ ಎಂದು ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಸದರಿ ವಿಚಾರ ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪದ್ಮ ಎಂಬುವವರು ದಾವಾ ಆಸ್ತಿಯನ್ನು ಒಳಗೊಂಡಂತೆ ಇನ್ನುಳಿದ ಎಲ್ಲಾ ಆಸ್ತಿಗಳನ್ನು ತನ್ನ ಸಹೋದರ ಅರುಣ್ ಕುಮಾರ್ ರವರ ಹೆಸರಿಗೆ ದಿಃ 31.01.2015 ರಂದು ಒಂದು ವಿಲ್ ಪತ್ರ ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪದ್ಮರವರು ತೀರಿಕೊಂಡ ನಂತರ ಅವರು ಮಾಡಿಟ್ಟಿದ್ದ ವಿಲ್ ಆಧಾರದ ಮೇಲೆ ದಾವಾ ಆಸ್ತಿಯನ್ನು ಅರುಣ್ ಕುಮಾರ್ ರವರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅರುಣ್ ಕುಮಾರ್ ರವರು ದಾವಾ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ಎಂ ಆರ್ ಹೆಚ್ 95/2022-2023 ರಂತೆ ಖಾತೆ ಮಾಡಿಸಿಕೊಂಡು ತಾವೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ

ಅರುಣ್ ಕುಮಾರ್ ರವರು ಸ್ವಾಧೀನ ಇರುವ ವಿಚಾರ ನನಗೆ ಚೆನ್ನಾಗಿ ಗೊತ್ತಿದ್ದರೂ ಸ್ವಾಧೀನ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ವಿಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪದ್ಮರವರು 1 ನೇ ಪ್ರತಿವಾದಿಯಿಂದ ಖರೀದಿ ಮಾಡಿರುವ ವಿಚಾರ ಮತ್ತು ಪದ್ಮರವರು ದಾವಾ ಆಸ್ತಿಯನ್ನು ಅರುಣ್ ಕುಮಾರ್ ರವರ ಹೆಸರಿಗೆ ವಿಲ್ ಮಾಡಿರುವ ವಿಚಾರ ಮತ್ತು ದಾವಾ ಆಸ್ತಿಯಲ್ಲಿ ಅರುಣ್ ಕುಮಾರ್ ರವರೇ ಸ್ವಾಧೀನದಲ್ಲಿ ಇರುವ ವಿಚಾರ ಗೊತ್ತಿದ್ದರೂ ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ